ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-5 (ಕೃಷ್ಣಾ)

ದಿನಾಂಕ: 01-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ. ಪ್ರತಿವಾದಿ 1(ಎ) ಯಿಂದ 1(ಜಿ) ರವರ ಪರ ವಕೀಲರಿಂದಃ</u>**

ನಾನು 3ನೇ ತರಗತಿವರೆಗು ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ನನ್ನ ಹುಟ್ಟಿದ ದಿನಾಂಕ ಗೊತ್ತಿಲ್ಲ ಆದರೆ ನನಗೆ 48 ವರ್ಷ ವಯಸ್ಸಾಗಿದೆ. ನನಗೆ ಈಗ 48 ವರ್ಷ ವಯಸ್ಸಾಗಿದೆ ಎಂದು ತೋರಿಸಲು ದಾಖಲೆ ಹಾಜರ ಮಾಡಿಲ್ಲ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3ನೇ ಖಂಡಿಕೆಯಲ್ಲಿ ಹೇಳಿರುವ ವಿಷಯ ನನ್ನ ತಂದೆ ನನಗೆ ಹೇಳಿರುತ್ತಾರೆ. ಮೃತ್ಯು ಪತ್ರದ ಬಗ್ಗೆ ನನಗೆ ನಮ್ಮ ತಂದೆ ಹೇಳಿದ್ದಾರೆ ಎಂದು ಬರೆಯಿಸಿಲ್ಲ ಎಂದರೆ ಸರಿಯಲ್ಲ. ಹೊರಟ್ಟಿ ಎನ್ನುವವರು ಕನ್ನಡದಲ್ಲಿ ಸಹಿ ಮಾಡಿದ್ದಾರೆ, ನನ್ನ ತಂದೆ ಇಂಗ್ಲೀಷನಲ್ಲಿ ಸಹಿ ಮಾಡಿದ್ದಾರೆ. ವಿ.ಆರ್.ಹೊರಟ್ಟಿ ಎಂದು ಇಂಗ್ಲೀಷನಲ್ಲಿರುವ ಸಹಿ ಅಂದರೆ ನಿಪಿ-29(ಸಿ) ನನ್ನ ತಂದೆಯ ಸಹಿ ಎಂದು ತೋರಿಸಲು ನನ್ನ ತಂದೆಯ ಸಹಿ ಇರುವ ಬೇರೆ ದಾಖಲೆ ಹಾಜರ ಮಾಡಿಲ್ಲ. ನಿಪಿ-29(ಸಿ) ನನ್ನ ತಂದೆಯ ಸಹಿ ಅಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಈಗ 38 ವರ್ಷ ವಯಸ್ಸಾಗಿದ್ದು, 1990 ರಲ್ಲಿ ನಾನು ಕೇವಲ 03 ವರ್ಷದವನಿದ್ದಿದ್ದು ಗೊತ್ತಾಗುತ್ತದೆ ಎಂದು ಹೇಳಿ ನನ್ನ ವಯಸ್ಸು ಸೂಚಿಸುವ

ಯಾವುದೇ ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. ಪ್ರತಿವಾದಿ 2(ಎ) ಯಿಂದ 2(ಇ) ರವರ ಪರ ವಕೀಲರಿಂದಃ**

ಪ್ರತಿವಾದಿ 1 ರವರ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ